ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಂಗಾರಪೇಟೆ

**ಸಿ.ಸಿ. ನಂಬರ್ – 1061/2015**

1) ಸರ್ಕಾರದ ಪರವಾಗಿ ಬಂಗಾರಪೇಟೆ ಪೊಲೀಸರು ---ಪಿರ್ಯಾದಿ

- ವಿರುದ್ಧ-

1) ರಮೇಶ್ ಅಲಿಯಾಸ್ ರಮೇಶ್ ಬಾಬು ---ಆರೋಪಿ
ಕೃಷ್ಣಪ್ಪ, 24 ವರ್ಷ, ಚಾಲಕ,
ಅತ್ತಿಗಿರಿಕೊಪ್ಪ ಗ್ರಾಮ,
ಬಂಗಾರಪೇಟೆ.

= = = = =

ದಿನಾಂಕ:17.02.2022. ಉಪಸ್ಥಿತರು : ಶ್ರೀ.ಅಜಿತ್ ದೇವರಮನಿ,.
ಬಿ.ಎಸ್.ಸಿ., ಎಲ್.ಎಲ್.ಬಿ
ಪ್ರಧಾನ ದಿವಾಣಿ ನ್ಯಾಯಾಧೀಶರು,
ಬಂಗಾರಪೇಟೆ.

ಆರೋಪಣೆ

ದಿನಾಂಕ:07.06.2014 ರಂದು ಮದ್ಯಾಹ್ನ 12.30 ಗಂಟೆಯಲ್ಲಿ ಬಂಗಾರಪೇಟೆ ಟೇಕಲ್ ರಸ್ತೆ, ವಿಷ್ಣು ಕಾಲೇಜ್ ಮುಂಭಾಗ ರಸ್ತೆಯಲ್ಲಿ ಪಿರ್ಯಾದಿ ವೆಂಕಟೇಶ್ ಮೂರ್ತಿ ರವರು ತನ್ನ ದ್ವಿಚಕ್ರ ವಾಹನ ಸಂಖ್ಯೆ: ಕೆಎ-40-ಹೆಚ್-1079 ರಲ್ಲಿ ಹಿಂಬದಿಯಲ್ಲಿ ರಮೇಶ್ ಎಂಬುವವರನ್ನು ಕುಳ್ಳಿರಿಸಿಕೊಂಡು ಸವಾರಿ ಮಾಡಿಕೊಂಡು ಬಂಗಾರಪೇಟೆ ಕಡೆ ಬರುತ್ತಿದ್ದಾಗ, ಹಿಂದಿನಿಂದ ಆರೋಪಿಯಾದ ನೀನು ಟ್ರ್ಯಾಕ್ಟರ್ ತಾತ್ಕಾಲಿಕ ನೋಂದಣಿ ಸಂಖ್ಯೆ: ಕೆಎ-07-ಟಿಆರ್-ಎನ್.ಎಸ್ಇ/12/13, ಇಂಜಿನ್ ನಂ.ಆರ್.ಕೆ.ಬಿ.ಸಿ.00107 ಮತ್ತು ಚಾಸಿಸ್ ನಂ.ಆರ್.ಕೆ.ಬಿ.ಸಿ.00107 ಅನ್ನು ಮಾನವನ ಜೀವಕ್ಕೆ ಹಾನಿಯಾಗುವಂತೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದಿದ್ದು, ಈ ಪ್ರಕಾರ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ 279 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಎರಡನೆಯದಾಗಿ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಯಾದ ನೀನು ತಾತ್ಕಾಲಿಕ ನೋಂದಣಿ ಟ್ರ್ಯಾಕ್ಟರ್ ಅನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು, ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿದ ಪರಿಣಾಮ, ಪಿರ್ಯಾದಿ ವೆಂಕಟೇಶ್ ಮೂರ್ತಿ ಮತ್ತು ರಮೇಶ್ ವಾಹನದಿಂದ ಕೆಳಗೆ ಬಿದ್ದು, ರಮೇಶ್‌ಗೆ ತೀವ್ರ ಸ್ವರೂಪದ ಗಾಯಗಳಾಗಿ, ದಿನಾಂಕ:07.08.2014 ರಂದು ಮಣಿಪಾಲ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಈ ಪ್ರಕಾರ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಮೂರನೆಯದಾಗಿ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಯಾದ ನೀನು ತಾತ್ಕಾಲಿಕ ನೋಂದಣಿ ಟ್ರ್ಯಾಕ್ಟರ್ ಅನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು, ದ್ವಿಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿದ ಪರಿಣಾಮ, ಪಿರ್ಯಾದಿ ವೆಂಕಟೇಶ್ ಮೂರ್ತಿಗೆ ಸಾಮಾನ್ಯ ಗಾಯಗಳಾಗಿದ್ದು, ಈ ಪ್ರಕಾರ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ 337 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಕೊನೆಯದಾಗಿ ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಯಾದ ನೀನು ತಾತ್ಕಾಲಿಕ ನೋಂದಣಿ ಟ್ರ್ಯಾಕ್ಟರ್ ಅನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿ, ಆರೋಪಿಯಾದ ನೀನು ವಾಹನವನ್ನು ಸ್ಥಳದಲ್ಲಿ ನಿಲ್ಲಿಸದೇ ವಾಹನ ಸಮೇತ ಹೊರಟು ಹೋಗಿದ್ದು, ಈ ಪ್ರಕಾರ ಆರೋಪಿಯಾದ ನೀನು ಕಲಂ 187 ಐ.ಎಂ.ವಿ. ಆಕ್ಟ್ ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಪ್ರಶ್ನೆಃ 1) ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ಆಪಾದನೆಯು ನಿಮಗೆ ತಿಳಿಯಿತೇ ?
ಉತ್ತರಃ

ಪ್ರಶ್ನೆಃ 2) ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

(ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ, ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು, ಅವು ಸರಿ ಇವೆಯೆಂದು ದೃಢೀಕರಿಸಲಾಯಿತು).

**(ಅಜಿತ್ ದೇವರಮನಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಗಾರಪೇಟೆ